**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 542/2018**

**ಚಾ.ಸಾ.** 8

**ಪ್ರಾ.ಸಾ.** 5

**ದಿನಾಂಕಃ 06.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಜೈಲಾನಿ |
| ತಂದೆಃ ಗಂಡನ ಹೆಸರು | ಮೆಹಬೂಬ ಸಾಬ್ |
| ಉದ್ಯೋಗ | ವ್ಯವಹಾರ |
| ವಯಸ್ಸು | 31 |
| ವಾಸಸ್ಥಳ | ಹುಬ್ಬಳ್ಳಿ |

**ಪ್ರಾರಂಭ ಸಮಯಃ 11.59 ಎ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಪ್ರಾಸಾ1 ನನ್ನ ಅಣ್ಣ. ಪ್ರಾಸಾ2 ನನ್ನ ಚಿಕ್ಕಪ್ಪ. ಚಾಸಾ.9 ಗೊತ್ತು. ಚಾಸಾ.10 ನನ್ನ ಅಣ್ಣನ ಹೆಂಡತಿ. ಚಾಸಾ.11 ನನ್ನ ತಾಯಿ. ಮೃತ ಶೌಕತ್ ನನ್ನ ಅಣ್ಣ.

ದಿಃ22.03.20018 ರಂದು ಸಂಜೆ 04.00 ಗಂಟೆ ಸಮಯದಲ್ಲಿ ನನ್ನ ಅಣ್ಣ ಮೃತ ಶೌಕತ್‌ರವರು ಹುಬ್ಬಳ್ಳಿಯಿಂದ ಸಾತೂ ಸೈಯಿದ್ ದರ್ಗ ಕಡೆಗೆ ಹೊರಟಿದ್ದನು. ನಾನು ಸದರಿ ಸಮಯದಲ್ಲಿ ಹುಬ್ಬಳ್ಳಿಯ ನನ್ನ ಅಂಗಡಿಯಲ್ಲಿದ್ದಾಗ ಚಾಸಾ.7 ರವರು ನನಗೆ ಕರೆ ಮಾಡಿ ಕಲಘಟಗಿ ಕಡೆಯಿದ ಕಾರವಾರ

ಕಡೆಗೆ ಹೊರಟಿದ್ದಂತಹ ಗೂಡ್ಸ ವಾಹನ ಸಂಖ್ಯೆ ಕೆ ಎ 24-8461 ವಾಹನವು ನನ್ನ ಅಣ್ಣನ ದ್ವಿ ಚಕ್ರವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದೆ ಎಂದು ನನಗೆ ಕರೆ ಮಾಡಿದ ಮೇರೆಗೆ ಕೂಡಲೇ ನಾನು ಮತ್ತು ಪ್ರಾಸಾ1 ರವರು ಹುಬ್ಬಳ್ಳಿಯಿಂದ ಘಟನಾ ಸ್ಥಳಕ್ಕೆ ಬಂದೆವು.

ಸದರಿ ಸ್ಥಳದಲ್ಲಿ ನಾವು ಬಂದು ನೋಡಲಾಗಿ ಒಂದು ಗೂಡ್ಸ ವಾಹನ ಮತ್ತು ನನ್ನ ಅಣ್ಣನ ದ್ವಿ ಚಕ್ರ ವಾಹನ ಇತ್ತು. ನನ್ನ ಅಣ್ಣನ ದ್ವಿ ಚಕ್ರ ವಾಹನದ ಸಂಖ್ಯೆ ಕೆ ಎ 25-3549. ಅಲ್ಲಿ ನೆರೆದಿದ್ದಂತಹ ಜನರು ನನ್ನ ಅಣ್ಣನನ್ನು ಕಲಘಟಗಿಯ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸನಲ್ಲಿ ಕರೆದುಕೊಂಡು ಹೋಗಿದ್ದರು. ಅಲ್ಲಿಂದ ನಾನು ನೇರವಾಗಿ ಸರ್ಕಾರಿ ಆಸ್ಪತ್ರೆಗೆ ಬಂದೆ. ನನ್ನ ಅಣ್ಣನನ್ನು ನೋಡಲಾಗಿ ಆತನ ತಲೆಗೆ, ಎದೆಗೆ, ಕೈ ಕಾಲುಗಳಿಗೆ ಗಾಯಗಳಾಗಿದೆ. ನನ್ನ ಅಣ್ಣ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮದ್ಯ ಮರಣ ಹೊಂದಿರುತ್ತಾರೆ.

ಗೂಡ್ಸ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಈ ದಿನ ನ್ಯಾಯಾಲಯದ ಮುಂದಿರುವ ಅಪಾದಿತನು ಸದರಿ ಗೂಡ್ಸ ವಾಹನದ ಚಾಲಕನಾಗಿದ್ದನು. ಗೂಡ್ಸ ವಾಹನ ಮತ್ತು ದ್ವಿ ಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆಪಾದಿತರ ಪರ ಶ್ರೀ ಎ ಆರ್ ಜಿ ವಕೀಲರಿಂದ**

ಘಟನೆಯಾದ 30-60 ನಿಮಿಷದೊಳಗಾಗಿ ನಾನು ಸ್ಥಳಕ್ಕೆ ಬಂದೆ. ಅಪಘಾತವು ಯಾರ ತಪ್ಪಿನಿಂದ ಆಯಿತು ಎಂದು ನಾನು ಖುದ್ದು ನೋಡಿಲ್ಲ ಮತ್ತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ನರೆದಿದ್ದಂತಹ ಜನರು ಅಪಾದಿತನ ತಪ್ಪಿನಿಂದ ಆಯಿತು ಎಂದು ಹೇಳಿದರು ಎಂದು ನುಡಿಯುತ್ತಾರೆ. ವಿಮಾ ಸೌಲಭ್ಯ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಾದಿತನಿಗೂ ಮತ್ತು ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಅಪಾದಿತನನ್ನು ನಾನು ಇದೇ ದಿನ ಮೊದಲೇ ಬಾರಿಗೆ ನೋಡುತ್ತಿದ್ದೇನೆ ಅಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**